1

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ.ಜಯಮಾಲ ಇವರು ನಿಯಮ-330ಎ ರಡಿಯಲ್ಲಿನ ಗಮನ ಸೆಳೆಯುವ ಸೂಚನೆಗೆ ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರ ಉತ್ತರ

**ಪ್ರಶ್ನೆ:**

ಮಲೆನಾಡು ಭಾಗದ ಜೀವನಾಡಿಯಾಗಿ ಸಾರ್ವಜನಿಕರಿಗೆ ಸಂಪರ್ಕ ಕಲ್ಪಿಸಲು ಕಳೆದ 30 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದ ಸಹಕಾರ ಸಾರಿಗೆ ಬಸ್ಸುಗಳ ಸಂಚಾರ ಸ್ಥಗಿತಗೊಂಡಿರುವುದರಿಂದ, ಮಲೆನಾಡಿನ ಮತ್ತು ಕರಾವಳಿ ಭಾಗದ ಶಿವಮೊಗ್ಗ, ಚಿಕ್ಕಮಗಳೂರು, ಮಂಗಳೂರು, ಉಡುಪಿ ಮತ್ತು ಕೆಲವು ಭಾಗದಲ್ಲಿರುವ ಗುಡ್ಡಗಾಡು ಪ್ರದೇಶದಿಂದ ಶಾಲೆಗೆ/ಕಾಲೇಜಿಗೆ ಹೋಗುತ್ತಿರುವ ವಿದ್ಯಾರ್ಥಿಗಳಿಗೆ ಸಾರ್ವಜನಿಕರಿಗೆ ಹಾಗೂ ಕೂಲಿ ಕಾರ್ಮಿಕರಿಗೆ ಪ್ರಯಾಣಿಸಲು ಅನಾನುಕೂಲವಾಗಿರುವ ಸಂಗತಿಯನ್ನು ಪ್ರಸ್ತಾಪಿಸಲು ಸದನದಲ್ಲಿ ಅನುಮತಿಯನ್ನು ಕೋರುತ್ತೇನೆ.

1. ಸಹಕಾರತತ್ವದಡಿ ಸ್ಥಾಪಿತವಾಗಿರುವ ಸಹಕಾರ ಸಾರಿಗೆ ಸಂಸ್ಥೆ ಸುಮಾರು 70 ಬಸ್ಸುಗಳನ್ನು 300 ಕ್ಕೂ ಹೆಚ್ಚಿನ ಕಾರ್ಮಿಕರು ಸಂಕಷ್ಟದಲ್ಲಿದ್ದಾರೆ, ಪುನಶ್ಚೇತನಕ್ಕೆ ಸರ್ಕಾರದ ನೆರವು ಕೋರಿ ಸಂಸ್ಥೆಯ ನೌಕರರು ದಿನಾಂಕ:18.02.2020 ರಂದು ಕೊಪ್ಪದಲ್ಲಿ ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದ್ದಾರೆ, ದಿನಾಂಕ: 17.02.2020 ರಿಂದಲೇ ಸುಮಾರು 70 ಬಸ್ಸುಗಳು ಹೊಂದಿರುವ ಸಹಕಾರ ಸಾರಿಗೆ ಬಸ್ಸುಗಳ ಸಂಚಾರ ಸ್ಥಗಿತವಾಗಿದೆ.
2. ಡಿಸೇಲ್ ದರ, ವಾಹನ ತೆರಿಗೆ, ವಾಹನ ವಿಮೆ, ವಾಹನ ಬಿಡಿ ಭಾಗಗಳ ದರ ಹೆಚ್ಚಳ, ವಾಹನಗಳ ದೈನಂದಿನ ನಿರ್ವಹಣೆ ವೆಚ್ಚ ಅಧಿಕವಾಗಿರುವುದರಿಂದ ಸಂಸ್ಥೆ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದೆ, ಪ್ರಯಾಣದರದಲ್ಲಿ ವಿದ್ಯಾರ್ಥಿಗಳಿಗೆ, ಅಂಗವಿಕಲರುಗಳಿಗೆ ರಿಯಾಯತಿ ನೀಡಲಾಗಿದ್ದರಿಂದ ರೂ.6.60 ಕೋಟಿ ಸರ್ಕಾರದಿಂದ ಸಂಸ್ಥೆಗೆ ಪಾವತಿ ಮಾಡಬೇಕಾಗಿದ್ದು, ಸಂಬಂಧಪಟ್ಟ ಕಡತವು ಇನ್ನೂ ಸರ್ಕಾರದ ಆರ್ಥಿಕ ಇಲಾಖೆಯಲ್ಲಿಯೇ ಬಾಕಿ ಇದೆ ಹಾಗೂ ಇತರೆ ಕಾರಣಗಳಿಂದ ಸಂಸ್ಥೆಯ ಆದಾಯವು ಕುಂಠಿತವಾಗಿದೆ.

ಪ್ರಸ್ತುತ ಮಕ್ಕಳಿಗೆ ಪರೀಕ್ಷೆ ಸಮಯವಾದ್ದರಿಂದ, ಇಂತಹ ಪರಿಸ್ಥಿತಿಯಲ್ಲಿ ಹಾಗೂ ರೈತರು ಬೆಳೆದ ತರಕಾರಿಗಳನ್ನು ರವಾನೆ ಮಾಡಿ ಮಾರಾಟ ಮಾಡಲು, ಸಾರ್ವಜನಿಕರ ಆರೋಗ್ಯ ತಪಾಸಣೆ, ಕೂಲಿ ಕಾರ್ಮಿಕರ ದೈನಂದಿನ ಚಟುವಟಿಕೆಗಳಿಗೆ ಸಹಕಾರ ಸಾರಿಗೆ ಸಂಸ್ಥೆಗಳ ಬಸ್ಸುಗಳ ಸಂಪರ್ಕವಿಲ್ಲದಿರುವುದರಿಂದ, ಈ ಭಾಗದ ಜನರು ಆತಂಕಕ್ಕೀಡಾಗಿದ್ದಾರೆ.

ಆದ್ದರಿಂದ ಈ ಬಗ್ಗೆ ಸರ್ಕಾರವು ಮಧ್ಯ ಪ್ರವೇಶಿಸಿ, ಮಲೆನಾಡಿನ ಜನರ ಆತಂಕವನ್ನು ನಿವಾರಣೆ ಮಾಡುವಂತೆ ಸೂಕ್ತ ಕ್ರಮಕೈಗೊಳ್ಳಲು ಈ ಸದನದ ಮೂಲಕ ಸರ್ಕಾರವನ್ನು ಕೋರುತ್ತೇನೆ.

**ಉತ್ತರ:**

ಸಹಕಾರ ಸಾರಿಗೆ ಸಂಸ್ಥೆಯ ವಾಹನಗಳನ್ನು ದಿನಾಂಕ:16.02.2020 ರಿಂದ ಸ್ಥಗಿತಗೊಳಿಸಿರುವ ಕಾರಣ ಕ.ರಾ.ರ.ಸಾ.ನಿಗಮದ ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಮಂಗಳೂರು ವಿಭಾಗಗಳ ವತಿಯಿಂದ ಕೊಪ್ಪದಿಂದ ಶಿವಮೊಗ್ಗ, ತೀರ್ಥಹಳ್ಳಿ, ಮೇಲ್ಪಾಲ್, ಬಾಳೇಹೊನ್ನೂರು, ಮೂಡಬೂರು, ಮಲ್ಲಂದೂರು, ಕಟ್ಟಿನಮನೆ, ಶೃಂಗೇರಿ-ಕೊಪ್ಪ-ಶಿವಮೊಗ್ಗ, ಉಡುಪಿ-ಶೃಂಗೇರಿ-ಬಾಳೇಹೊನ್ನೂರು, ಉಡುಪಿ-ಶೃಂಗೇರಿ-ಚಿಕ್ಕಮಗಳೂರು, ಉಡುಪಿ-ಕೊಪ್ಪ-ಬಿರೂರು ಮಾರ್ಗಗಳಲ್ಲಿ ಒಟ್ಟು 16 ಬಸ್‌ಗಳಿಂದ 56 ಸುತ್ತುವಳಿಗಳನ್ನು ಶಾಲಾ/ಕಾಲೇಜು ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕ ಪ್ರಯಾಣಿಕರಿಗೆ ಅವಶ್ಯಕತೆಗೆ ಅನುಗುಣವಾಗಿ ಸಾರಿಗೆ ಸೌಲಭ್ಯ ಕಲ್ಪಿಸಲಾಗಿರುತ್ತದೆ.

**ಸಂಖ್ಯೆ: ಟಿಡಿ 50 ಟಿಸಿಕ್ಯೂ 2020**

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು